## ಒಪ್ಪಬೇಕಲ್ಲ...

ಗಣಿತದ ಕ್ಲಾಸಿಗೆ ಗಣೇಶ ಅರ್ಧ ಗಂಟೆ ತಡವಾಗಿ ಬಂದ. ಗಣಿತದ ಅಧ್ಯಾಪಕರು ಸ್ವಲ್ಪ ಸಿಟ್ಟಿನಿಂದಲೇ ಕೇಳಿದರು, ‘ಯಾಕೋ ಗಣೇಶ, ಕ್ಲಾಸಿಗೆ ಇಷ್ಟು ತಡ?’ ಎಂದು. ಗಣೇಶ, ‘ಬೈಕ್ ಪಂಕ್ಚರ್ ಆಗಿತ್ತು ಸರ್, ಅದನ್ನ ರಿಪೇರಿ ಮಾಡಿಸಿಕೊಂಡು ಬರುವಷ್ಟರಲ್ಲಿ ಇಷ್ಟು ತಡವಾಯ್ತು’ ಎಂದು ವಿವರಣೆ ಕೊಟ್ಟ. ಅದಕ್ಕೆ ಸಮಾಧಾನಗೊಳ್ಳದ ಅಧ್ಯಾಪಕರು, ‘ಅದನ್ನ ಅಲ್ಲೇ ನಿಲ್ಲಿಸಿ, ಬಸ್ಸಿನಲ್ಲಿ ಬಂದ್ರೆ ಬೇಗ ಬರಬಹುದಿತ್ತಲ್ಲ?’ ಎಂದರು. ಅದಕ್ಕೆ ಗಣೇಶ ಅಷ್ಟೇ ಸಾವಧಾನದಿಂದ, ‘ನೀವೇನೊ ಹಾಗೆ ಹೇಳ್ತೀರಿ... ಆದರೆ ನಿಮ್ಮ ಮಗಳು ಬಸ್ಸಿನಲ್ಲಿ ಬರಲು ಒಪ್ಪಬೇಕಲ್ಲ ಸರ್...’ ಎಂದ!

**ಗುರುಗಣೇಶ ಬಿ.ಕೆ.**





ಚಿತ್ರಗಳು: ಗಣೇಶ ಆಚಾರ್ಯ

## ಪುಕ್ಕಲು ನಮ್ಮಪ್ಪ

ಗುಂಡ ಮತ್ತು ಮಂಜ ಊಟದ ಸಮಯದಲ್ಲಿ ತಮ್ಮ ತಮ್ಮ ಅಪ್ಪಂದಿರ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು. ಗುಂಡ ಹೇಳಿದ: ‘ನೋಡೋ ಮಂಜ, ನಮ್ಮಪ್ಪ ಇಷ್ಟು ಪುಕ್ಕಲು ಅಂತ ನನಗಿವತ್ತೇ ಗೊತ್ತಾಯ್ತು.’ ಮಂಜ ಅಚ್ಚರಿಯಿಂದ ಕೇಳಿದ, ‘ಅದ್ಹೇಗೆ ಗೊತ್ತಾಯ್ತು?’ ಗುಂಡ ಹೇಳಿದ: ‘ನನ್ನನ್ನು ಶಾಲೆಗೆ ಬಿಡಲು ಬರುವಾಗ ನಮ್ಮಮ್ಮ ನಮ್ಮಪ್ಪನಿಗೆ ‘ಬೀದಿ ನಾಯಿಗಳಿವೆ ರೀ ಹುಷಾರು’ ಅಂದಿದ್ದಳು. ಅದಕ್ಕೇ ನಮ್ಮಪ್ಪ ಬೀದಿ ನಾಯಿ ಕಂಡಾಗಲೆಲ್ಲ ಗಟ್ಟಿಯಾಗಿ ನನ್ನ ಕೈಯನ್ನು ಬಿಗಿಯಾಗಿ ಹಿಡ್ಕೋತಿದ್ದ...’

**ಸಾಗರ್ ಕೆ. ಹೆಗಡೆ**